(SRI A. SHANKARA ALVA)

(*b*) Does not arise in view of reply to clause (*a*).

(*c*) Does not arise in view of reply to clause (*a*).

ಶ್ರೀ ಆರ್. ಎಸ್. ಪಾಟೀಲ್.—ಈ ವಿಷಯದಲ್ಲಿ ಪ್ರಶ್ನೆಯನ್ನು ಕೇಳುತ್ತಾ ಇರುವುದು ಅಲ್ಲಿ ಕೆಲವು ಸರ್ವೀಸ್ ಕೋ-ಆಪರೇಟೀವ್ ಸೊಸೈಟಿಗಳು ಕೆಲಸ ಮಾಡದೆ ಇರತಕ್ಕಂಥಾದ್ದನ್ನು ತಿಳಿದು ಕೊಂಡು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆದರೆ ಈ ಪ್ರಶ್ನೆಗೆ ತಮಗೆ ಬಂದಿರತಕ್ಕ ಉತ್ತರ ತಪ್ಪು ಇರಬಹುದು ಎಂದು ಕಾಣುತ್ತದೆ. ಆದ್ದರಿಂದ ಅದನ್ನು ಪುನಃ ಇನ್‌ವೆಸ್ಟಿಗೇಟ್ ಮಾಡಿ ಮತ್ತೆ ತಿಳಿಸುತ್ತೀರಾ?

ಶ್ರೀ ಎ. ಶಂಕರ ಆಳ್ವ.—ಅಲ್ಲಿ ಈಗ ಕೆಲಸ ಮಾಡುತ್ತಾ ಇರತಕ್ಕ ಸರ್ವೀಸ್ ಕೋ-ಆಪರೇಟಿವ್ ಸೊಸೈಟಿಗಳು 35 ಮಾತ್ರ ಇವೆ. 81 ಅಗ್ರಿಕರ್‌ಚರಲ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗಳು ಮತ್ತು ರಾರ್ಡ್‌ಸ್ಕೇರ್ ಅಂಡ್ ಸ್ಕ್ವಾರ್‌ಸ್ಕೇರ್ ಕೋ-ಆಪರೇಟಿವ್ ಸೊಸೈಟಿಗಳು ಇವೆ. ಅವು ಗಳೆರಾ ಕೆಲಸ ಮಾಡುತ್ತಿವೆ.

Kannada Typewriting and Shorthand

107. Sri T. R. SHAMANNA (Fort). —

Will the Minister for Education be pleased to state :—

(*a*) the steps taken by the Government to popularise Kannada Typewring and Shorthand ;

(*b*) whether there is any proposal to give special assistance to recognised Commercial Institutes to give trainig in Kannada Typewriting and Kannada Shorthand ?

Sri A. R. BADARINAYANA IYENGAR (Minister for Education). —

(*a*) (i) Government have sanctioned 200 Scholarships annually to students learning Kannada Typewriting and Shorthand.

(ii) lower tuition fees has been prescribed for students learning Kannana Typewriting and Shorthand.

(iii) Special Pay has been sanctioned to the Typists and Stenographers, Grand I and II, at the following rate :

(1) those who have passed or those who pass both Kannada Typewriting (Junior) and Kannada Shorthand (Junior) Examinations or those who have passed or those who pass Kannada Typewriting (Senior) Examination Rs. 15 per month.

(2) those who have passed or who pass Kannada Typewriting (Senior) and Kannada Shorthand (Senior) Examinations Rs. 25 per month.

(iv) Proposal to introduce Kannada Typewriting and Shorthand as one of the courses in certain selected Institutions is under consideration.

(*b*) The matter will be examined.

ಶ್ರೀ ಟಿ. ಆರ್. ಶಾಮಣ್ಣ.—ಈಗ ನಮ್ಮ ರಾಜ್ಯದಲ್ಲಿ ಒಟ್ಟು 350 ಕಮರ್ಷಿಯಲ್ ಇನ್‌ಸ್ಟಿಟ್ಯೂಟ್‌ಗಳು ಇವೆ. ಇದರಲ್ಲಿ ಕನ್ನಡ ಶೀಘ್ರಲಿಪಿ ಮತ್ತು ಕನ್ನಡ ಟೈಪ್‌ರೈಟಿಂಗ್ ಕಲಿಯುತಕ್ಕ ವಿದ್ಯಾರ್ಥಿಗಳಿಗೆ 200 ವಿದ್ಯಾರ್ಥಿ ವೇತನಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಕನ್ನಡ ಟೈಪ್‌ರೈಟಿಂಗ್ ಮತ್ತು ಕನ್ನಡ ಶೀಘ್ರಲಿಪಿಯನ್ನು ಕಲಿಯುತಕ್ಕವರಿಗೆ ಟ್ಯೂಷನ್ ಫೀಜನ್ನು ಕಡಿಮೆ ಮಾಡಿ ಎಂದು ಹೇಳಿದ್ದಾರೆ. ಆದರೆ ಸರ್ಕಾರದವರು ಕಮರ್ಷಿಯಲ್ ಇನ್‌ಸ್ಟಿಟ್ಯೂಟ್‌ಗಳಿಗೆ ಯಾವ ವಿಧವಾದ ಗ್ರಾಂಟನ್ನೂ ಕೊಡುವುದಿಲ್ಲ. ಹೀಗಿರುವಾಗ ಇನ್‌ಸ್ಟಿಟ್ಯೂಟ್‌ನವರು ಫೀಜನ್ನು ಕಡಿಮೆ ಮಾಡಿ ಅವರಿಗೆ ಟ್ಯೂಷನ್‌ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಆದ್ದರಿಂದ ಈ ಕಮರ್ಷಿಯಲ್ ಇನ್‌ಸ್ಟಿಟ್ಯೂಟ್‌ಗಳಿಗೆ ಯಾವುದಾದರೂ ಒಂದು ರೂಪದಲ್ಲಿ ಗ್ರಾಂಟು ಕೊಟ್ಟು ಅವರು ಕನ್ನಡ ಟೈಪರೈಟಿಂಗ್ ಮತ್ತು ಕನ್ನಡ ಷಾರ್ಟ್‌ಹ್ಯಾಂಡ್ ಅನ್ನು ವಿದ್ಯಾರ್ಥಿಗಳಿಗೆ ಕಲಸುವುದಕ್ಕೆ ಹೆಚ್ಚಿನ ಅವಕಾಶ ಮಾಡಿಕೊಡುತ್ತೀರಾ!

† ಶ್ರೀ ಎ. ಆರ್. ಬದರಿನಾರಾಯಣ ಅಯ್ಯಂಗಾರ್.—ಈಗ ಟ್ಯೂಷನ್ ಫೀಜನ್ನು ಕಡಿಮೆ ಮಾಡಿರತಕ್ಕದ್ದು ಹೆಚ್ಚಿನ ಜನ ಕನ್ನಡ ಟೈಪ್‌ರೈಟಿಂಗ್ ಮತ್ತು ಕನ್ನಡ ಷಾರ್ಟ್‌ಹ್ಯಾಂಡ್ ಕಲಿಯಲಿ ಎನ್ನುವ ದೃಷ್ಟಿಯಿಂದ. ಇಂಗ್ಲೀಷ್ ಟೈಪ್‌ರೈಟಿಂಗ್ ಮತ್ತು ಇಂಗ್ಲೀಷ್ ಷಾರ್ಟ್‌ಹ್ಯಾಂಡಿಗೆ ಜೂನಿಯರ್‌ಗೆ ಫೀಜು 5 ರೂಪಾಯಿ ಮಾಡಿದೆ, ಸೀನಿಯರ್‌ಗೆ 6 ರೂಪಾಯಿ ಮಾಡಿದೆ. ಕನ್ನಡ ಷಾರ್ಟ್‌ಹ್ಯಾಂಡ್ ಮತ್ತು, ಕನ್ನಡ ಟೈಪ್‌ರೈಟಿಂಗಿಗೆ ಜೂನಿಯರ್‌ಗೆ 4 ರೂಪಾಯಿಗಳು ಮತ್ತು ಸೀನಿಯರ್‌ಗೆ 5 ರೂಪಾಯಿ ಇದೆ. ಇಷ್ಟು ಮಾತ್ರ ಕಡಿಮೆ ಮಾಡಿದೆ. ಜಾಸ್ತಿ ಜನ ಇದನ್ನು ಕಲಿಯಲಿ ಎನ್ನುವ ದೃಷ್ಟಿಯಿಂದ ಇದನ್ನು ಈ ರೀತಿ ಕಡಿಮೆ ಮಾಡಿದೆ.

ಶ್ರೀ ಟಿ. ಆರ್. ಶಾಮಣ್ಣ.—ಕಮರ್ಷಿಯಲ್ ಇನ್‌ಸ್ಟಿಟ್ಯೂಟ್‌ಗಳಿಗೆ ಟ್ಯಾಕ್ಸ್ ಹಾಕಿ ಕನ್ನಡ ಶೀಘ್ರಲಿಪಿ ಮತ್ತು ಕನ್ನಡ ಟೈಪ್‌ರೈಟಿಂಗ್ ಅನ್ನು ಕಡಿಮೆ ಫೀಜಿನಲ್ಲಿ ವಿದ್ಯಾರ್ಥಿಗಳಿಗೆ ಹೇಳಿಕೊಡಿ ಎಂದು ತಾವು ಹೇಳುತ್ತಿದ್ದೀರಿ, ತಾವು ಆ ಇನ್‌ಸ್ಟಿಟ್ಯೂಟ್‌ಗಳಿಗೆ ಯಾವ ಉತ್ತೇಜನ ಮತ್ತು ಗ್ರಾಂಟನ್ನು ಕೊಡುತ್ತಿಲ್ಲ. ಆದ್ದರಿಂದ ತಾವು ದಯವಿಟ್ಟು ಈ ಕಮರ್ಷಿಯಲ್ ಇನ್‌ಸ್ಟಿಟ್ಯೂಟ್‌ಗಳಿಗೆ ಉತ್ತೇಜನ ಕೊಟ್ಟು ಗ್ರಾಂಟ್ ಕೊಟ್ಟು ಅವರು ಹೆಚ್ಚು ಜನ ವಿದ್ಯಾರ್ಥಿಗಳಿಗೆ ಕನ್ನಡ ಟೈಪ್‌ರೈಟಿಂಗ್ ಮತ್ತು ಕನ್ನಡ ಶೀಘ್ರಲಿಪಿಯನ್ನು ಹೇಳಿಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

Sri A. R. BADARINARAYANA IYENGAR.—It is a suggestion for action.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಾಮರ್ಸ್ ಎಜ್ಯುಕೇಷನ್ ನಹ ಇತರ ಎಜ್ಯುಕೇಷನ್ನಿನ ಹಾಗೆ ಬಹಳ ಎಸೆನ್‌ಷಿಯಲ್ ಎಜ್ಯುಕೇಷನ್. ಆದ್ದರಿಂದ ಸರ್ಕಾರದವರು ಹೈಸ್ಕೂಲುಗಳಿಗೆ ಗ್ರಾಂಟ್ ಕೊಡುವ ಹಾಗೆ ಕಾಮರ್ಸ್ ಎಜ್ಯುಕೇಷನ್ ಇನ್‌ಸ್ಟಿಟ್ಯೂಟ್‌ಗಳಿಗೂ ಕೂಡ ಗ್ರಾಂಟ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri A. R. BADARINARAYANA IYENGAR.—The suggestion will be noted.

ಶ್ರೀ ಶರಣಪ್ಪ.—ವಿಧಾನಮಂಡಲದಲ್ಲಿ ಕನ್ನಡ ತರ್ಜುಮೆ ಮಾಡುವವರು ಮತ್ತು ಕನ್ನಡ ಟೈಪಿಸ್ಟ್‌ಗಳು ಸಾಕಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸ್ಪೆಷಲ್ ಪೇ ಕೊಡುವ ಯೋಜನೆ ಏನಾದರೂ ಮಾಡಿದ್ದೀರಾ ?

ಶ್ರೀ ಎ. ಆರ್. ಬದರೀನಾರಾಯಣ ಅಯ್ಯಂಗಾರ್.—ಸ್ಪೆಷಲ್ ಪೇ ಮಾಡಿಲ್ಲ. ತಮ್ಮ ಸಲಹೆಯನ್ನು ಗಮನಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಕನ್ನಡ ಷಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಜೂನಿಯರ್ ಪಾಸ್ ಮಾಡಿರುವವರಿಗೆ 15 ರೂಪಾಯಿ ಮತ್ತು 25 ರೂಪಾಯಿ ಹೆಚ್ಚಿನ ಅಲೋಯನ್ಸ್ ಕೊಡುತ್ತಿದ್ದೀರಿ. ಇಂಗ್ಲೀಷ್ ಷಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಪಾಸ್ ಮಾಡಿರುವವರಿಗೆ ಸ್ಪೆಷಲ್ ಪೇ ಕೊಡುತ್ತಿರುವ ಹಾಗೆ ಕನ್ನಡದಲ್ಲಿ ಸ್ಪೆಷಲ್ ಪೇ ಕೊಡುತ್ತಿಲ್ಲ. ಪ್ರೊಫೆಷಿಯನ್ಸಿ ಪಾಸ್ ಮಾಡಿದವರಿಗೆ ಯಾವ ವಿಧವಾದ ಅಲೋಯನ್ಸ್ ಕೊಡುವುದಿಲ್ಲ. ಕನ್ನಡ ಆಡ್ಮಿನಿಸ್ಟ್ರೇಟಿವ್ ರಾಂಗವೇಜ್ ಆಗಿ ಜಾರಿಗೆ ಬರುವುದಕ್ಕೆ ಪ್ರಯತ್ನ ಮಾಡುತ್ತಾ ಇರುವುದರಿಂದ, ಕೆಲವು ಕಾಲದವರಿಗೆ ಕನ್ನಡ ಷಾರ್ಟ್‌ಹ್ಯಾಂಡ್, ಕನ್ನಡ ಟೈಪ್‌ರೈಟಿಂಗ್‌ನ್ನು ಕಲಿಯತಕ್ಕವರಿಗೆ ಮತ್ತು ಪ್ರೊಫಿಷಿಯನ್ಸಿ ಮಾಡಿದವರಿಗೆ ಹೆಚ್ಚು ಅಲೋಯನ್ಸ್ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

Sri A. R. BADARINARAYANA IYENGAR.—The suggestion is noted.

Sri R. V. KADAM.—May I know the requirements of Kannada Typewriters by the Government ?

Sri A. R. BADARINARAYANA IYENGAR.—Sanction has been accorded for the purchase of 300 typewriters.

Sri R. V. KADAM.—Is that all the total requirment of Government ?

Sri A. R. BADARINARAYANA IYENGAR.—The total requirement has not been assessed.

Sri S. M. YAHYA.—Are there Government sponsored Kannada Typewriting Institutions in our state ; is there any scheme by which in every District, the Government would sponsor Kannada Typewriting institutions ?

Sri A. R. BADARINARAYAN IYENGAR.—I want notice for that question.

Sri V. N. PATIL.—As I understood from the reply of the Minister that the Government has no estimate of the number of Kannada Typists required by them. When there is no plan may I know how the Government can implement the scheme to encourage the Kannada Typists in the State ?

Sri A. R. BADARINARAYANA IYENGAR.—The requirement is a continuous process and it goes on changing and at no particular time it will be static.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮೈಸೂರು ರಾಜ್ಯದಲ್ಲಿ ಕನ್ನಡ ಟೈಪ್ ರೈಟಿಂಗ್ ಮತ್ತು ಷಾರ್ಟ್‌ಹ್ಯಾಂಡ್ ಹುದ್ದೆಗಳಲ್ಲಿ ರಾಜ್ಯ ಸರ್ಕಾರ ನಿಮ್ನ ವರ್ಗಕ್ಕೆ ಪ್ರಾತಿನಿಧ್ಯ ಕೊಡಬೇಕೆಂದು ತಮ್ಮ ಗಮನಕ್ಕೆ ಬಂದಿದೆಯೇ ? ಕನ್ನಡ ಅಡಳಿತ ಭಾಷೆಯಾಗಿ ಬರುವಾಗ ಅದಕ್ಕಾಗಿ ವಿಶೇಷ ರೀತಿಯ ಒಂದು ವ್ಯವಸ್ಥೆ ಮಾಡಿ, ಈ ನಿಮ್ನ ವರ್ಗದವರಿಗೆ ಮತ್ತು ನಿಮ್ನ ಪಂಗಡಗಳಿಗೆ ಕನ್ನಡದಲ್ಲಿ ಷಾರ್ಟ್‌ಹ್ಯಾಂಡ್ ಮತ್ತು ಕನ್ನಡ ಟೈಪ್ ರೈಟಿಂಗ್ ಕಲಿಯಲು ತರಬೇತಿ ಕೇಂದ್ರಗಳನ್ನು ಮಾಡುತ್ತೀರಾ ?

Sri A. R. BADARINARAYANA IYENGER.—It is a suggestion and it is noted.

ಶ್ರೀ ಟಿ. ಆರ್. ಶಾಮಣ್ಣ.—ಈಗ ವಿಧಾನಮಂಡಲದಲ್ಲಿ ಅದರಲ್ಲೂ ವಿಧಾನ ಸಭೆ ಮತ್ತು ವಿಧಾನಪರಿಷತ್ತಿನ ಕಾರ್ಯಕಲಾಪಗಳನ್ನು ವರದಿ ಮಾಡತಕ್ಕ ಈ ರಿಪೋರ್ಟರ್ಸ್‌ಗೆ ಹೆಚ್ಚಿನ ಅವಶ್ಯಕತೆ ಇದೆ. ಆದ್ದರಿಂದ ಪ್ರೊಫಿಷಿಯನ್ಸಿ ಪಾಸ್ ಮಾಡಿರತಕ್ಕವರಿಗೆ ಸ್ಪೆಷಲ್ ಅಲೋಯನ್ಸ್ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

Sri A. R. BADARINARAYANA IYENGAR.—The question has been put and I have answered.

MADAM SPEAKER.—Sri V. N. Patil may put Sri Krishnan's question No. 111.